**ಕನ್ನಡ ಸಂಭ್ರಮ**

### ಇಂದಿನ ಕನ್ನಡ ಸಾಹಿತ್ಯ ಕೃಷಿಯಲ್ಲಿ ಯಾವ ವಿಭಾಗದ ಪದವೀಧರರು ಹೆಚ್ಚಾಗಿ ತೊಡಗಿಕೊಂಡಿದ್ದಾರೆ? ಒಂದು ಕುತೂಹಲಕಾರಿ ಅಧ್ಯಯನ ಬರಹ.

■ ಕೆ.ಎನ್. ಗಣೇಶಯ್ಯ | ಎ.ಎಸ್. ಹರೀಶ




ಚಿತ್ರ: ಈಶ್ವರ ಬಡಿಗೇರ

# ಇದು ಬಿ.ಇ. ಹಾಗೂ ವೈದ್ಯಕೀಯ ಪದವೀಧರರ ಕಾಲವೇ?

ತನ್ನ ಮಗ, ಬಿ.ಇ. ಕಂಪ್ಯೂಟರ್ ಸೈನ್ಸ್‌ಗೆ ಸೇರಿಕೊಂಡನೆಂದು ತಿಳಿಸಿ, ನನ್ನ ಹಾರೈಕೆ ಪಡೆಯಲು ನನ್ನ ತಮ್ಮ, ಮಗ ನಾರಾಯಣನೊಂದಿಗೆ ಮನೆಗೆ ಬಂದಿದ್ದ. ಮಾತಿನ ನಡುವೆ ತಿಳಿದ ಒಂದು ವಿಪರ್ಯಾಸ ನನ್ನನ್ನು ಆಶ್ಚರ್ಯಚಕಿತನನ್ನಾಗಿಸಿತ್ತು. ಬಿ.ಇ.ಗೆ ಸೇರುತ್ತಿರುವ ತನಗೆ 'ಕನ್ನಡ ಓದಲು ಬರುವುದಿಲ್ಲ' ಎಂದು ನಾರಾಯಣ ಹೇಳಿದಾಗ. 'ಅದು ಹೇಗೆ ಸಾಧ್ಯ' ಎಂದು ನಾನು ಆಶ್ಚರ್ಯಪಟ್ಟು ಕೇಳಿದೆ. ನಮ್ಮ ಮಾತುಕತೆ ಮುಂದುವರೆಯಿತು.

'ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ನಿನಗೆ ಕನ್ನಡ ಇರಲಿಲ್ಲವೆ?'

'ಇತ್ತು. ಎರಡೂ ಕಡೆ ಕನ್ನಡ ಇತ್ತು. ಆದರೂ'

'ಆದರೂ ಕನ್ನಡ ಓದಲು ಬಾರದು ಎಂದರೆ? ಹಾಗಾದರೆ ಕನ್ನಡ ಹೇಗೆ ಪಾಸ್ ಮಾಡಿದೆ?'

ನನ್ನ ತಮ್ಮ ಮುಜುಗರ ಪಡುತ್ತಲೇ ಹೇಳಿದ: 'ಓದುತ್ತಾನೆ. ಆದರೆ ತುಂಬಾ ನಿಧಾನ. ಆದ ಕಾರಣ, ಕನ್ನಡ ಪರೀಕ್ಷೆಯ ಹಿಂದಿನ ದಿನ ಅವನಿಗಾಗಿ ಅವರಮ್ಮ ಪಾಠಗಳನ್ನು ಓದುತ್ತಿದ್ದಳು. ಇವನು ಅದನ್ನು ಕೇಳಿಸಿಕೊಂಡು ಹೋಗಿ ಪರೀಕ್ಷೆ ಬರೆದ'.

ಹೀಗೆ, ಮಗ ನಾರಾಯಣನ ಬಗ್ಗೆ ಮೆಚ್ಚುಗೆಯನ್ನೂ ವಿಷಾದವನ್ನೂ ಒಟ್ಟಿಗೆ ವ್ಯಕ್ತಪಡಿಸಿ ಹೇಳಿದಾಗ, ನನ್ನಲ್ಲಿ ನಗು ಮೂಡಿತ್ತು.

ಅಮ್ಮನ ಬಳಿ ಓದಿಸಿಕೊಂಡು ಹೋಗಿ ಕನ್ನಡ ಪರೀಕ್ಷೆಯನ್ನು ಹೇಗೆ ತಾನೆ ಬರೆದಿದ್ದಾನು, ಹೇಗೆ ತಾನೆ ಉತ್ತೀರ್ಣನಾಗಿರಲು ಸಾಧ್ಯ ಎಂದು ಅಚ್ಚರಿಗೊಂಡು ಕೇಳಿದೆ: 'ಹಾಗಾದರೆ ಕನ್ನಡದಲ್ಲಿ ಎಷ್ಟು ಸ್ಕೋರ್ ಮಾಡಿದೆ?'

ಉತ್ತರಿಸಲು ಒಂದು ಕ್ಷಣ ಹಿಂಜರಿಕೆ ತೋರಿದ ನನ್ನ ತಮ್ಮ ನಂತರ ನಗುತ್ತ ಹೇಳಿದ: 'ಶೇ. 99 ಸ್ಕೋರ್ ಮಾಡಿದ್ದಾನೆ'. ಅದನ್ನು ಕೇಳಿ ನನಗೂ ನಗು ತಡೆಯಲಾಗಲಿಲ್ಲ.

ಎಲ್ಲವನ್ನು ಗಮನಿಸುತ್ತ ಕುಳಿತಿದ್ದ ನನ್ನ ವಿದ್ಯಾರ್ಥಿ ಹರೀಶನಂತೂ ಬಿದ್ದು ಬಿದ್ದು ನಗತೊಡಗಿದವನು, 'ಅಲ್ಲ ಸರ್, ಪಿಯುಸಿ ಮಟ್ಟದಲ್ಲಿ ಕನ್ನಡದಲ್ಲಿ 99 ಸ್ಕೋರ್ ಮಾಡಿರುವ ನಿಮ್ಮ ತಮ್ಮನ ಮಗ ನಾರಾಯಣನಿಗೆ ಕನ್ನಡ ಓದಲೂ ಬಾರದು. ಆದರೆ ಅದೇ ಪಿಯುಸಿ ಕನ್ನಡದಲ್ಲಿ ಶೇ. 50 ಕೂಡ ಸ್ಕೋರ್ ಮಾಡಲಾಗದ ನೀವು ಕನ್ನಡದಲ್ಲಿ ಕಥೆ–ಕಾದಂಬರಿ ಬರೆಯುತ್ತಿದ್ದೀರಿ. ಇದೆಂತಹ ವಿರೋಧಾಭಾಸ'